

# ಮುಳ್ಳಿನ ಸಸ್ಯಗಳ ಕಿರೀಟ ಯುಫೋರ್ಬಿಯಾ

★ ಚಿತ್ರ -ಲೇಖನ: ರಾಮಪ್ರಸಾದ್ ಬಿ.

ಚಿಕ್ಕ ಚಿಕ್ಕ ಚಕ್ರಾಕಾರದ ಗುಲಾಬಿ ಮಿಶ್ರಿತ ಬಿಳಿ ಬಣ್ಣದ ಬಿಲ್ಲೆಗಳಂತೆ ಕಂಡುಬರುವ ಸುಂದರ ಹೂಗಳನ್ನು ತೋಟಗಳಲ್ಲಿ, ಕಚೇರಿಗಳ ಮುಂದೆ ನೋಡಿರುತ್ತೀರಿ. ಹೂವೆಷ್ಟು ಸುಂದರವಿದೆಯೆಂದು ಕೀಳಲು ಹೋದರೆ, ಅಗೋ ಕಾಂಡದಲ್ಲಿರುತ್ತವೆ ಮುಳ್ಳುಗಳು! ಅದಕ್ಕೇ ಇರಬೇಕು ಸೌಂದರ್ಯದ ಜೊತೆಗೆ ಪ್ರಪಾತವೂ ಇರುತ್ತದೆ ಎಂಬ ಸೂಕ್ಷ್ಮವನ್ನು ದಿ. ಪುಟ್ಟಣ್ಣ ಕಣಗಾಲ್‌ರವರು ತಮ್ಮ 'ಮಾನಸ ಸರೋವರ'ದಲ್ಲಿ ಹೇಳಿರುವುದು. ಇದರ ಕಾಂಡವು ನೋಡಲು ಕ್ಯಾಕ್ಟಸ್‌ನ ಪಡಿಯಚ್ಚಿನಂತಿರುತ್ತದೆ. ಆದರೆ ಇಲ್ಲಿ ಎಲೆಗಳು ಬೇರೆ ಇರುತ್ತವೆ. ಈ ಗಿಡದ ಕಾಂಡವನ್ನು ಕತ್ತರಿಸಿ ತಂದು ಮತ್ತೊಂದೆಡೆ ನೆಟ್ಟರೆ ಬೆಳೆಯಬಲ್ಲ ನಿರಂತರ ಹೂ ಬಿಡುವ ಸಸ್ಯವೇ ಯುಫೋರ್ಬಿಯಾ. ಇದನ್ನು ಸ್ಪರ್ಜ್ ಎಂದೂ ಕರೆಯುತ್ತಾರೆ.

ಪ್ಲಾಂಟೇ ರಾಜ್ಯದ ಯುಫೋರ್ಬಿಷಿಯೋ ಕುಟುಂಬದ ಸಸ್ಯವಾದ ಇದನ್ನು

-ಎಂಟನೇ ಪುಟ ನೋಡಿ